

# ಬಾಂಧವ್ಯ ಬೆಸೆವ ಯುವ

## ಎಲ್ಲರಿಗೂ ಹೊಂದುವ ಕಥೆ

ಯುವ ಎಲ್ಲಾ ಕಾಲಕ್ಕೂ ಹೊಂದುವ ಎಲ್ಲರಿಗೂ ಕನೆಕ್ಟ್ ಆಗುವ ಸಿನಿಮಾವಾಗಿದೆ. ಚಿತ್ರ ನೋಡುತ್ತಿದ್ದರೆ ನಾವೆಲ್ಲರೂ ಕಳೆದಿರುವ ಕ್ಷಣ ನಮ್ಮ ಕಣ್ಣುಮುಂದೆ ಹಾದು ಹೋಗುತ್ತದೆ. ಇಡೀ ಚಿತ್ರದ್ದದಕ್ಕೂ ಅಪ್ಪು ಸರ್ ನೆನಪು ಬಿಡದೆ ಕಾಡುತ್ತದೆ ಎನ್ನುತ್ತಾರೆ ನಿರ್ದೇಶಕರು.




ಪ್ರೀತಿಯ ಅಪ್ಪುವನ್ನು ಕಳೆದುಕೊಂಡ ಅಭಿಮಾನಿಗಳು ದೊಡ್ಮನೆ ಮೊಮ್ಮಗ ಯುವ ರಾಜ್‌ಕುಮಾರ್ ಅವರಿಗಾಗಿ ಸಿನಿಮಾ ನಿರ್ದೇಶನ ಮಾಡುವಂತೆ ನಿರ್ದೇಶಕ ಸಂತೋಷ್ ಆನಂದ್ ರಾಮ್ ಅವರಲ್ಲಿ ಮನವಿ ಮಾಡಿದ್ದರು. ಅಭಿಮಾನಿಗಳ ಮನವಿ ಆಲಿಸಿದ ನಿರ್ದೇಶಕರು ಯುವರಾಜ್‌ಗಾಗಿ ಹೊಸ ಕಥೆ ಹೆಣದು, ಯುವ ಶೀರ್ಷಿಕೆಯಲ್ಲಿ ಸಿನಿಮಾವನ್ನು ನಿರ್ದೇಶಿಸಿದರು. ಈಗ ಯುವ ರಾಜ್ಯಾದ್ಯಂತ ಅದ್ದೂರಿಯಾಗಿ ತೆರೆಗೆ ಬಂದಿದೆ. ಯುವ ಅವರನ್ನು ಕಣ್ತುಂಬಿಕೊಂಡು ಅಭಿಮಾನಿಗಳು ಖುಷಿಯಾಗಿದ್ದಾರೆ. ಯುವ ಯೂತ್‌ಫುಲ್ ಸ್ಟೋರಿಯ ಜತೆಗೆ ಬಾಂಧವ್ಯದ ಕಥೆಯನ್ನು ಹೊತ್ತು ಬಂದಿದೆ.

ಯುವ ಚಿತ್ರರಂಗದಲ್ಲಿ ಹೊಸ ಹವಾ ಸೃಷ್ಟಿಸಿದೆ. ಟ್ರೇಲರ್ ಹಾಡುಗಳನ್ನು ನೋಡಿದ ಅಭಿಮಾನಿಗಳು ಯುವ ರಾಜ್‌ಕುಮಾರ್ ಡ್ಯಾನ್ಸ್, ಆ್ಯಕ್ಷನ್ ನೋಡಿ ಫಿದಾ ಆಗಿದ್ದಾರೆ. ಕಾಲೇಜು ಕಥೆಯ ಜತೆಗೆ, ಗ್ಯಾಂಗ್‌ಸ್ಟರ್ ಸ್ಟೋರಿಯೂ ಅಡಕವಾಗಿದೆ. ಕರಾವಳಿ ಸೊಗಡು ಚಿತ್ರದಲ್ಲಿ ಬೆರೆತಿದೆ. ತಂದೆ ಮಗನ ಬಾಂಧವ್ಯದ ಕಥನಾ ಚಿತ್ರದ ಹೈಲೆಟ್ಸ್ ಆಗಿದೆ.

### ಮಧುರ ಬಾಂಧವ್ಯ

ಯುವ ಮಧ್ಯಮ ವರ್ಗದ ಕುಟುಂಬದ ಕಥೆಯನ್ನು ಒಳಗೊಂಡಿದೆ. ಮಧ್ಯಮ ವರ್ಗದ ಬದುಕು, ಬವಣೆ ಅಲ್ಲಿನ ಸಂಬಂಧಗಳು, ಬಿಡಿಸಲಾಗದ ಬಂಧಗಳು, ಸಮಾಜದಲ್ಲಿನ ಸಂಘರ್ಷಗಳು ಹೀಗೆ ಎಲ್ಲವೂ ಬೆರೆತಿವೆ. ಎಲ್ಲಕ್ಕಿಂತ ಮಿಗಿಲಾಗಿ ತಂದೆ ಮಗನ ಬಾಂಧವ್ಯವೂ ಮನಸೂರೆಗೊಳ್ಳುತ್ತದೆ. ಮಗುವನ್ನು ಜಗತ್ತಿಗೆ ಪರಿಚಯಿಸುವುದು ತಾಯಿಯಾದರೆ, ಆ ಮಗುವಿಗೆ ಬದುಕನ್ನು ಪರಿಚಯಿಸುವುದು ತಂದೆ. ಹಾಗಾಗಿ ಬದುಕಿನಲ್ಲಿ ತಂದೆಯ ಮಹತ್ವವನ್ನು ಚಿತ್ರದಲ್ಲಿ ಸಾರಲಾಗಿದೆ. ಕೈ ಹಿಡಿದು ನಡೆಸು.. ಎಂಬ ಈ ಹಾಡು ಇಡೀ ಚಿತ್ರದ ಕಥೆಗೆ ಹೊಸ ತಿರುವುದು ನೀಡುತ್ತದೆ. ತಂದೆಯ ತ್ಯಾಗವನ್ನು ಹಾಡಿನಲ್ಲಿ ಹೇಳಲಾಗಿದೆ ಎನ್ನುತ್ತಾರೆ ನಿರ್ದೇಶಕ ಸಂತೋಷ್ ಆನಂದ್‌ರಾಮ್.

### ಆ್ಯಕ್ಷನ್‌ನಲ್ಲಿ ಮಿಂಚಿಂಗ್

ಯುವರಾಜ್ ಅವರಿಗಾಗಿ ಹೊಂದುವ ಕಥೆಯನ್ನು ಹೆಣೆದೆ, ಆ ಕಥೆಗೆ ತಕ್ಕಂತೆ ಅವರು ತಯಾರಿ ನಡೆಸಿದರು. ಅವರ ಡೆಡಿಕೇಷನ್ ಮೆಚ್ಚಲೇಬೇಕು, ಎಷ್ಟಾದರೂ ದೊಡ್ಮನೆ ಮೊಮ್ಮಗ ಹಾಗಾಗಿ ಅವರಲ್ಲಿ ಸರಳತೆ ಮೈಗೂಡಿದೆ. ಹೇಳಿದ್ದನ್ನು ಆಲಿಸಿ ಅದಕ್ಕೆ ತಕ್ಕಂತೆ ಸಿದ್ಧತೆ ನಡೆಸಿ ಕ್ಯಾಮೆರಾ ಮುಂದೆ ನಿಲ್ಲುತ್ತಿದ್ದರು. ಡ್ಯಾನ್ಸ್, ಫೈಟ್‌ನಲ್ಲಿ ಯುವ ಅದ್ಭುತವಾಗಿ ಮಿಂಚಿದ್ದಾರೆ. ಯುವ ಸಿನಿಮಾ ಆರಂಭಕ್ಕೂ ಮೊದಲೇ ಸುಮಾರು ಹತ್ತು ದಿನಗಳ ಕಾಲ ಡ್ಯಾನ್ಸ್, ಫೈಟ್‌ಗಾಗಿಯೇ ಮುಡಿಪಾಗಿಟ್ಟಿದ್ದರು ಎಂದು ಸಂತೋಷ್ ಖುಷಿಯಿಂದ ನುಡಿದರು. ಯುವರಾಜ್‌ಗೆ ಜತೆಯಾಗಿ ಸಪ್ತಮಿಗೌಡ ನಟಿಸಿದ್ದಾರೆ. ಉಳಿದಂತೆ ಸುಧಾರಾಣಿ, ಅವಿನಾಶ್, ಕಿಶೋರ್ ಮತ್ತಿತರರು ಚಿತ್ರದ ತಾರಾಬಳಗದಲ್ಲಿದ್ದಾರೆ.

# ಮೈನಾದಲ್ಲಿ ಭವ್ಯಾ



ಕನ್ನಡ ಚಿತ್ರರಂಗದಲ್ಲಿ ಇಂದಿಗೂ ಬೇಡಿಕೆಯ ನಟಿಯಾಗಿರುವ ಹಿರಿಯ ನಟಿ ಭವ್ಯಾ, ಈಗ ಕಿರುತೆರೆಗೂ ಎಂಟ್ರಿ ಕೊಟ್ಟಿದ್ದಾರೆ. ಉದಯ ಟಿವಿಯಲ್ಲಿ ಪ್ರಸಾರವಾಗುತ್ತಿರುವ ಮೈನಾ ಧಾರಾವಾಹಿಯಲ್ಲಿ ಭವ್ಯಾ ಅತಿಥಿ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದು, ಮಹಿಳಾ ಹಾಸ್ಟೆಲ್ ಮುಖ್ಯಸ್ಥೆ ಅರುಂಧತಿಯ ಪಾತ್ರದಲ್ಲಿ ನಟಿಸುತ್ತಿದ್ದಾರೆ. ಅರುಂಧತಿ ಶಿಸ್ತಿನ ಸಿಪಾಯಿಯಾದರೂ, ಸಹೃದಯಿ. ಊರು ಬಿಟ್ಟು ಪರವೂರಿಗೆ ಬಂದಿರುವ ಹೆಣ್ಣುಮಕ್ಕಳೇ ಹೆಚ್ಚಿರುವ ಜಾಗದಲ್ಲಿ ಎಲ್ಲರನ್ನೂ ನಿಯಂತ್ರಿಸುತ್ತ ಎಲ್ಲರ ಸಮಸ್ಯೆಗಳಿಗೂ ಸ್ಪಂದಿಸುತ್ತ ಎಲ್ಲರ ಭಾವನೆಗಳಿಗೂ ಬೆಲೆ ಕೊಡುವ ಅಪರೂಪದ ಪಾತ್ರವಿದು. ಮೈನಾ ಜೀವನದಲ್ಲಿ ಹಠಾತ್ತನೆ ಬರುವ ಅನಿರೀಕ್ಷಿತ ತಿರುವು ಕಂಗೆಡಿಸಿದಾಗ ಅರುಂಧತಿ ಅವಳಿಗೆ ಆಸರೆಯಾಗಿ ನಿಲ್ಲುತ್ತಾರೆ. ಹಾಗೆಯೇ ಇವರ ಮಹಿಳಾ ಹಾಸ್ಟೆಲ್‌ನಲ್ಲಿರುವ ಇತರ ನಾಲ್ಕು ಹೆಣ್ಣುಮಕ್ಕಳೂ ಮೈನಾ ಧಾರಾವಾಹಿಯ ಮಹತ್ವದ ಪಾತ್ರಗಳಾಗಿವೆ ಮಹಿಳಾ ಹಾಸ್ಟೆಲ್ ಈ ಧಾರಾವಾಹಿಯಲ್ಲಿ ಒಂದು ಬಹುಮುಖ್ಯ ಅಂಗವೇ ಆಗಿದೆ. ಅರುಂಧತಿ ಪಾತ್ರ ನನಗೆ ಬಹಳ ಹಿಡಿಸಿತು. ಪ್ರಸ್ತುತ ಕಾಲಘಟ್ಟಕ್ಕೆ ಹಿಡಿದ ಕೈಗನ್ನಡಿಯಂತೆ ಈ ಪಾತ್ರ ಭಾಸವಾಯಿತು. ಹಾಗಾಗಿ ಈ ಧಾರಾವಾಹಿಯಲ್ಲಿ ನಟಿಸಲು ಸಂತಸದಿಂದಲೇ ಒಪ್ಪಿದೆ ಎನ್ನುತ್ತಾರೆ ಭವ್ಯಾ.



# ಸ್ಕ್ಯಾಮ್ ಜಾಡು ಹಿಡಿದ ಪ್ರವೀಣ

ಶಿಕ್ಷಣವೇ ಸರ್ವ ಸಮಸ್ಯೆಗೂ ಮದ್ದು. ಆದರೆ ಈಗ ಶಿಕ್ಷಣವೂ ವ್ಯಾಪಾರೀಕರಣವಾಗಿದ್ದು, ಅಲ್ಲಿಯೂ ಪ್ರಭಾವಿಗಳ ಕೈವಾಡವಿದೆ. ಇಲ್ಲಿ ನಡೆಯುವ ಸ್ಕ್ಯಾಮ್‌ಗಳನ್ನು ಮನಕ್ಕೆ ಮುಟ್ಟುವಂತೆ ಹೇಳುವ ಸ್ಕ್ಯಾಮ್ 1770 ಚಿತ್ರ ತೆರೆಗೆ ಬರುತ್ತಿದೆ. ಚಿತ್ರದ ಟ್ರೇಲರ್ ಬಿಡುಗಡೆಯಾಗಿದ್ದು, ಸಿನಿಮಾದ ಬಗ್ಗೆ ನಿರೀಕ್ಷೆ ಹೆಚ್ಚುವಂತೆ ಮಾಡಿದೆ. ಪ್ರಸ್ತುತ ಶಿಕ್ಷಣ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲುವ ಕಥನಾ ಸಿನಿಮಾದಲ್ಲಿದೆ. ಇಂದು ಬಡವರಿಗೆ ಹಾಗೂ ಮಧ್ಯಮವರ್ಗದ ಜನರಿಗೆ ಶಿಕ್ಷಣದ ವೆಚ್ಚ ದುಬಾರಿಯಾಗಿದೆ. ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿನ ನ್ಯೂನ್ಯತೆಗಳನ್ನು ತೋರಿಸುವ ಪ್ರಯತ್ನವನ್ನು ಈ ಚಿತ್ರದಲ್ಲಿ ಮಾಡಲಾಗಿದೆ.

> ವಿದ್ಯಾರ್ಥಿಗಳು ಹಾಗೂ ಪೋಷಕರು ತಪ್ಪದೇ ನೋಡಬೇಕಾದ ಸಿನಿಮಾವಿದು. ಎಲ್ಲಾ ಪೋಷಕರಿಗೂ ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂಬ ಆಸೆಯಿರುತ್ತದೆ. ಆದರೆ ಕೆಲವೊಂದು ಪ್ರತಿಷ್ಟಿತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ಯಾವೆಲ್ಲಾ ಸವಾಲುಗಳನ್ನು ಎದುರಿಸಬೇಕು ಎಂಬುದನ್ನು ಚಿತ್ರದಲ್ಲಿ ಮನಕ್ಕೆ ಮುಟ್ಟುವಂತೆ ಕಟ್ಟಿಕೊಡಲಾಗಿದೆ.
>
> -ವಿಕಾಸ್ ಪುಷ್ಪಗಿರಿ ನಿರ್ದೇಶಕ

ವಿಕಾಸ್ ಪುಷ್ಪಗಿರಿ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದು, ಡಿ.ಕ್ರಿಯೇಷನ್ಸ್ ಲಾಂಛನದಲ್ಲಿ ದೇವರಾಜ್ ಈ ಚಿತ್ರವನ್ನು ನಿರ್ಮಾಣ ಮಾಡಿದ್ದಾರೆ. ಸ.ಹಿ.ಪ್ರಾ. ಶಾಲೆ ಕಾಸರಗೋಡು ಚಿತ್ರದಲ್ಲಿ ದಡ್ಡ ಪ್ರವೀಣನಾಗಿ ನಟಿಸಿದ್ದ ರಂಜನ್,



ಚಿತ್ರದ ನಾಯಕನಾಗಿ ಕಾಣಿಸಿಕೊಂಡಿದ್ದಾರೆ. ನಿಶ್ಚಿತಾ, ಹರಿಣಿ, ನಾರಾಯಣಸ್ವಾಮಿ, ನಟನ ಪ್ರಶಾಂತ್, ರಾಘು ಶಿವಮೊಗ್ಗ, ಶ್ರೀನಿವಾಸ ಪ್ರಭು, ಬಿ.ಸುರೇಶ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಸತೀಶ್ ಆರ್ಯನ್ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ.

# ದರ್ಶನಕ್ಕೆ ಸಿದ್ಧವಾದ ವಿಜಯದಾಸರು




ವಿಜಯದಾಸರ ಜೀವನದ ಕುರಿತ ದಾಸವರೇಣ್ಯ ಶ್ರೀವಿಜಯದಾಸರು ಚಿತ್ರ ತೆರೆಗೆ ಸಿದ್ಧವಾಗಿದ್ದು, ದಾಸರು ಏಪ್ರಿಲ್ ಹನ್ನೆಡರಂದು ದರ್ಶನ ನೀಡಲಿದ್ದಾರೆ. ಈ ಹಿಂದೆ ಶ್ರೀಜಗನ್ನಾಥದಾಸರು ಚಿತ್ರ ಭರ್ಜರಿ ಯಶಸ್ಸು ಪಡೆಯಿತು. ಈ ಯಶಸ್ಸಿನ ಖುಷಿಯಲ್ಲಿರುವ ನಿರ್ದೇಶಕ ಮಧುಸೂದನ್ ಹವಾಲ್ದಾರ್ ವಿಜಯದಾಸರ ಕುರಿತಾದ ದಾಸವರೇಣ್ಯ ಶ್ರೀವಿಜಯದಾಸರು ಚಿತ್ರವನ್ನು ನಿರ್ದೇಶಿಸಿ ತೆರೆಗೆ ತರುತ್ತಿದ್ದಾರೆ. ಎಸ್.ಪಿ.ಜೆ ಮೂವೀಸ್ ಲಾಂಛನದಲ್ಲಿ ತ್ರಿವಿಕ್ರಮ ಜೋಶಿ ಈ ಚಿತ್ರವನ್ನು ನಿರ್ಮಿಸಿದ್ದಾರೆ. ಜತೆಗೆ ವಿಜಯದಾಸರ ಪಾತ್ರದಲ್ಲಿ ನಟಿಸಿದ್ದಾರೆ. ವಿಜಯದಾಸರ ಪತ್ನಿ ಅರಳಮ್ಮನಾಗಿ ಶ್ರೀಲತಾ ಅಭಿನಯಿಸಿದ್ದಾರೆ. ಉಳಿದಂತೆ ಪ್ರಭಂಜನ ದೇಶಪಾಂಡೆ, ವಿಜಯಾನಂದ ನಾಯಕ್, ಮಾಜಿ ಶಾಸಕ ಬಸವನಗೌಡ ಮುಂತಾದವರು ತಾರಾಬಳಗದಲ್ಲಿದ್ದಾರೆ. ವಿಜಯ ಕೃಷ್ಣ ಸಂಗೀತ,, ಜೆ.ಎಂ.ಪ್ರಹ್ಲಾದ್ ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿರುವ ಈ ಚಿತ್ರವನ್ನು ಮಧುಸೂದನ್ ಹವಾಲ್ದಾರ್ ನಿರ್ದೇಶಿಸಿದ್ದಾರೆ. ಹಂಪಿ, ಕನಕಗಿರಿ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ.



ಕನ್ನಡದಲ್ಲಿ ನವಕೋಟಿ ನಾರಾಯಣ, ಭಕ್ತ ಕನಕದಾಸ ಚಿತ್ರದ ನಂತರ ಹರಿದಾಸರ ಕುರಿತಾದ ಯಾವುದೇ ಸಿನಿಮಾಗಳು ಮೂಡಿಬರಲಿಲ್ಲ. ಹಲವುವರ್ಷಗಳ ಬಳಿಕ ಶ್ರೀಜಗನ್ನಾಥದಾಸರು ಚಿತ್ರ ತೆರೆಗೆ ಬಂತು. ಆನಂತರ ಪ್ರಸನ್ನ ವೆಂಕಟದಾಸರು, ಈಗ ದಾಸವರೇಣ್ಯ ವಿಜಯದಾಸರು ಚಿತ್ರ ತೆರೆಗೆ ಬರಲು ಸಿದ್ದವಾಗಿದೆ. ವಿಜಯದಾಸರು ಚಿತ್ರವನ್ನು ನಿರ್ಮಿಸಿ, ನಟಿಸಿದ್ದು ಖುಷಿ ಕೊಟ್ಟಿದೆ ಎಂದು ನಿರ್ಮಾಪಕ ತ್ರಿವಿಕ್ರಮ ಜೋಷಿ ಸಂತಸ ಹಂಚಿಕೊಂಡರು, ರಾಜ್ಯದಲ್ಲಿ ಮಾತ್ರವಲ್ಲದೆ ವಿದೇಶದಲ್ಲಿಯೂ ಚಿತ್ರ ತೆರೆಗೆ ಬರಲಿದೆ.







> ನಾನು ತೂಗುದೀಪ ಬ್ಯಾನರ್‌ನಿಂದ ಚಿತ್ರರಂಗಕ್ಕೆ ಪರಿಚಿತಳಾದವಳು. ಈಗ ದರ್ಶನ್ ಅವರು ನಮ್ಮ ಚಿತ್ರದ ಟ್ರೇಲರ್ ರಿಲೀಸ್ ಮಾಡಿದ್ದು ಖುಷಿಕೊಟ್ಟಿದೆ. ಈ ಹಿಂದಿನ ಎಲ್ಲಾ ಸಿನಿಮಾಗಳಿಗಿಂತ ಇದರಲ್ಲಿ ನನ್ನದು ವಿಭಿನ್ನವಾದ ಪಾತ್ರವಾಗಿದೆ. ಇಲ್ಲಿ ದೆವ್ವ ಯಾರು, ಅದು ಯಾರನ್ನು ಕಾಡುತ್ತದೆ, ಯಾಕೆ ಎಂಬುದನ್ನು ಸಿನಿಮಾದಲ್ಲಿಯೇ ನೋಡಬೇಕು.
>
> -ರಚಿತಾ ರಾಮ್ ನಟಿ





# ಡೆವಿಲ್ ಲುಕ್‌ನಲ್ಲಿ ರಚಿತಾ

ಅಯೋಗ್ಯ ಚಿತ್ರದ ಬಳಿಕ ನೀನಾಸಂ ಸತೀಶ್ ಹಾಗೂ ರಚಿತಾ ರಾಮ್ ಮತ್ತೆ ಒಂದಾಗಿದ್ದಾರೆ. ಈ ಬಾರಿ ಮ್ಯಾಟ್ನಿಯಲ್ಲಿ ಹೊಸ ಕಥೆ ಹೇಳಿ ರಂಜಿಸಲು ಬರುತ್ತಿದ್ದಾರೆ. ನೀನಾಸಂ ಸತೀಶ್ ಸಿನಿಮಾಗಳು ಎಂದರೆ ಕಾಮಿಡಿಯ ಜತೆಗೆ ಸೆಂಟಿಮೆಂಟ್ ಕೂಡ ಮಿಳಿತವಾಗಿರುತ್ತದೆ. ಆದರೆ ಮ್ಯಾಟ್ನಿ ಈ ಹಿಂದಿನ ಸಿನಿಮಾಗಳಿಂತ ವಿಭಿನ್ನವಾಗಿದೆ. ಇಲ್ಲಿ ತ್ರಿಕೋನ ಪ್ರೇಮಕಥೆಯ ಜತೆಗೆ ಹಾರರ್ ಕಥೆಯೂ ಇದೆ. ಸದ್ಯ ಮ್ಯಾಟ್ನಿ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ನಟ ದರ್ಶನ್ ಟ್ರೇಲರ್ ರಿಲೀಸ್ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು. ತೆರೆಯಲ್ಲಿ ಕ್ಯೂಟ್ ಹಾಗೂ ರೊಮ್ಯಾಂಟಿಕ್ ಲುಕ್‌ನಲ್ಲಿ ಮಿಂಚಿ ಮನಸೂರೆಗೊಂಡಿದ್ದ ಡಿಂಪಲ್ ಕ್ವೀನ್ ರಚ್ಚು, ಈಗ ಡೆವಿಲ್ ಅವತಾರ ತಾಳಿದ್ದು ಪ್ರೇಕ್ಷಕರನ್ನು ಅಚ್ಚರಿಯಲ್ಲಿ ಮುಳುಗಿಸಿದ್ದಾರೆ. ಅದಿತಿ ಪ್ರಭುದೇವ ಕೂಡ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಉಳಿದಂತೆ ಶಿವರಾಜ್ ಕೆ.ಆರ್.ಪೇಟೆ, ನಾಗಭೂಷಣ್, ಪೂರ್ಣ ಮೈಸೂರು, ದಿಗಂತ್ ದಿವಾಕರ್, ತುಳಸಿ ಶಿವರಾಮ್ ತಬಲ ನಾಣಿ ತಾರಾಬಳಗದಲ್ಲಿದ್ದಾರೆ.

ಮನೋಹರ್ ಕಾಂಪಲ್ಲಿ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದು, ಎಫ್ 3 ಪ್ರೊಡಕ್ಷನ್ಸ್‌ನಲ್ಲಿ ಪಾರ್ವತಿ ಗೌಡ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಪೂರ್ಣಚಂದ್ರ ತೇಜಸ್ವಿ ಸಂಗೀತ ಸಂಯೋಜಿಸಿದ್ದು, ಸುಧಾಕರ್ ಮತ್ತು ಕೀರ್ತನ್ ಪೂಜಾರಿ ಛಾಯಾಗ್ರಾಹಣದ ಜವಾಬ್ದಾರಿ ನಿರ್ವಹಿಸಿದ್ದಾರೆ.

> ಚಿತ್ರದ ಚಿತ್ರೀಕರಣ ಮುಗಿದು ಬಹಳ ದಿನಗಳೇ ಕಳದಿವೆ. ಚಿತ್ರವನ್ನು ಆದಷ್ಟು ಬೇಗ ತೆರೆಗೆ ತರಬೇಕು ಎಂಬ ಆಸೆ ಇದ್ದರೂ, ಅದು ಸಾಧ್ಯವಾಗುತ್ತಿರಲಿಲ್ಲ. ಅಂತೂ ಈಗ ಚಿತ್ರದ ಬಿಡುಗಡೆಗೆ ಕಾಲ ಕೂಡಿ ಬಂದಿದೆ. ಈ ಚಿತ್ರದಲ್ಲಿ ನಿರ್ದೇಶಕರು ನನ್ನನ್ನು ಹೊಸ ಗೆಟಪ್‌ನಲ್ಲಿ ತೋರಿದ್ದಾರೆ, ನನ್ನ ಪಾತ್ರ ಎಲ್ಲರ ಮನಸೂರೆಗೊಳ್ಳಲಿದೆ.
>
> -ನೀನಾಸಂ ಸಂತೀಶ್ ನಟ



# ಸಂದೇಶ ಸಾರಿದ ತಾರಿಣಿ



ತಾರಿಣಿ ಕನ್ನಡ ಚಿತ್ರರಂಗಕ್ಕೆ ಹೊಸತನ ತಂದಿದೆ. ವಿನೂತನ ಪ್ರಯೋಗವನ್ನು ಮಾಡಿದೆ. ನಾಯಕಿ ಹೀಗೆ ಇರಬೇಕು ಎಂಬ ನಿಯಮವನ್ನು ಮೀರಿ ಸಾಮಾಜಿಕ ಸಂದೇಶವನ್ನು ಸಾರಿದೆ. ತಾರಿಣಿ ಗರ್ಭಿಣಿ ಮಹಿಳೆಯ ಕಥೆಯನ್ನು ಹೊತ್ತುಬಂದಿದ್ದು, ನಟಿ ಮಮತಾ ರಾಹುತ್ ಗರ್ಭಿಣಿಯಾಗಿಯೇ ನಟಿಸಿದ್ದಾರೆ. ತಮ್ಮ ಚಿತ್ರದ ಕುರಿತಂತೆ ವಿ. ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

**ವಿ.ಸಿ : ತಾರಿಣಿ ಸಾಮಾಜಿಕ ಸಂದೇಶ ಸಾರುವ ಕಥೆಯೆ?**

**ಮಮತಾ ರಾಹುತ್ :** ಹೌದು, ಹೆಣ್ಣು ಭ್ರೂಣ ಹತ್ಯೆ ನಿಲ್ಲಿಸಿ ಎಂಬ ಸಂದೇಶ ಈ ಚಿತ್ರದಲ್ಲಿದೆ. ಇಂದು ಆಧುನಿಕತೆ ಮುಂದುವರಿದರೂ ಕೂಡ ಕೆಲವು ಕಡೆ ಭ್ರೂಣ ಹತ್ಯೆ ಸದ್ದಿಲ್ಲದೆ ನಡೆಯುತ್ತಿದೆ. ಹಾಗಾಗಬಾರದು, ಭೂಣ ಹತ್ಯೆ



ತಡೆಗಟ್ಟಬೇಕು ಎಂದು ಹೇಳುವ ನಿಟ್ಟಿನಲ್ಲಿ ಸಿನಿಮಾ ಸಿದ್ಧವಾಗಿದೆ. ಇದು ನನ್ನ ಮನದಲ್ಲಿ ಮೂಡಿದ ಕಥೆ, ಅದಕ್ಕೆ ನಿರ್ದೇಶಕ ಸಿದ್ದು ಪೂರ್ಣಚಂದ್ರ ಕಥೆಯ ರೂಪ ಕೊಟ್ಟು ನಿರ್ದೇಶಿಸಿದ್ದಾರೆ. ನನ್ನ ಪತಿ ಡಾ. ಸುರೇಶ್ ಸಿನಿಮಾ ನಿರ್ಮಾಣ ಮಾಡುವ ಮೂಲಕ ನನ್ನ ಕನಸಿಗೆ ಪುಷ್ಠಿ ನೀಡಿದ್ದಾರೆ.

**ವಿ.ಸಿ : ಈ ಪಾತ್ರ ನಿಮಗೆ ಚಾಲೆಂಜಿಂಗ್ ಅನ್ನಿಸಿತೆ?**

ಮಮತಾ : ಹೌದು, ಪ್ರತಿ ಸನ್ನಿವೇಶವೂ ಕೂಡ ಚಾಲೆಂಜಿಂಗ್ ಆಗಿತ್ತು. ನಾನು ಮನೆಯಲ್ಲಿ ಮಡದಿಯಾಗಿ ಸೆಟ್‌ನಲ್ಲಿ ನಟಿಯಾಗಿ ನನ್ನ ಕರ್ತವ್ಯ ನಿರ್ವಹಿಸುತ್ತಿದ್ದೆ. ಇದು ಗರ್ಭಿಣಿಯ ಕಥೆಯಾಗಿದ್ದರಿಂದ, ನಾನು ಗರ್ಭಿಣಿಯಾಗಿದ್ದಗಲೇ ತಾರಿಣಿಯಾಗಿ ಬಣ್ಣಹಚ್ಚಿದೆ. ಈ ಪಾತ್ರ ತುಂಬಾ ಖುಷಿ ಕೊಟ್ಟಿತು. ಇಲ್ಲಿ ಕಥೆಯೇ ಮುಖ್ಯ, ಅದಕ್ಕೆ ನಟಿಯಾದವರು ಜೀವತುಂಬಬೇಕು ಎಂಬುದನ್ನು ಇಲ್ಲಿ ಹೇಳಿದ್ದೇವೆ.

**ವಿ.ಸಿ : ಚಿತ್ರದಲ್ಲಿ ಮಗು ಕೂಡ ಅಭಿನಯಿಸಿದೆಯಲ್ಲಾ ?**

**ಮಮತಾ :** ನಿಜವಾಗಿಯೂ ಇದು ನನಗೆ ಖುಷಿ ಕೊಟ್ಟ ವಿಚಾರ, ಶೂಟಿಂಗ್ ಸಮಯದಲ್ಲಿಯೇ ನಾನು ಗರ್ಭಿಣಿಯಾಗಿದ್ದೆ. ಅದೊಂದು ದಿನ ನನಗೆ ಹೆರಿಗೆ ನೋವು ಕಾಣಿಸಿಕೊಂಡಿತು. ಆಗ ನನ್ನ ಪತಿ ಕೂಡಲೇ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಿದರು. ಹೆರಿಗೆಯೂ ಆಯಿತು. ವಿಶೇಷ ಎಂದರೆ ನನಗೆ ಸರಕಾರಿ ಆಸ್ಪತ್ರೆಯಲ್ಲಿಯೇ ಹೆರಿಗೆಯಾಯಿತು. ಆಸ್ಪತ್ರೆಯ ಅಧಿಕಾರಿಗಳ ಪರ್ಮಿಷನ್ ಪಡೆದು ಅಲ್ಲಿಯೇ ಚಿತ್ರೀಕರಣ ನಡೆಸಿದೆವು. ಆ ಸನ್ನಿವೇಶದಲ್ಲಿ ನನ್ನ ಮಗು ಕೂಡ ಕಾಣಿಸಿಕೊಂಡಿದೆ.

**ವಿ.ಸಿ : ಈ ಸಿನಿಮಾ ನಿಮಗೆ ಎಷ್ಟು ವಿಶೇಷ ಎನಿಸಿದೆ ?**

**ಮಮತಾ :** ತಾರಿಣಿ ನಿಜವಾಗಿಯೂ ವಿಶೇಷದಲ್ಲಿ ವಿಶೇಷ. ಈ ಹಿಂದಿನ ಚಿತ್ರಗಳಲ್ಲಿ ನಾಯಕಿಯಾಗಿ ಗ್ಲಾಮರ್ ಲುಕ್‌ನಲ್ಲಿ ಮಿಂಚಿದ್ದೆ. ತಾರಿಣಿ ಯಲ್ಲಿಯೂ ನಾನೇ ನಾಯಕಿ, ಆದರೆ ತುಂಬು ಗರ್ಭಿಣಿಯಾಗಿ ನಟಿಸಿದ್ದು ಖುಷಿಕೊಟ್ಟಿದೆ. ಹುಟ್ಟಿದಾಗಲೇ ನನ್ನ ಮಗುವೂ ಚಿತ್ರದಲ್ಲಿ ಕಾಣಿಸಿಕೊಂಡಿದೆಯಲ್ಲ ಅದು ನಿಜವಾಗಿಯೂ ಸಂತಸದ ಕ್ಷಣ. ತಾರಿಣಿ ತೆರೆಗೆ ಬರುತ್ತಿರುವುದು ನನಗೆ ಹಬ್ಬದ ಸಂಭ್ರಮದಂತೆ.

